# ಸೊರಬ ತಾಲ್ಲೂಕಿನ ಶೈವ ಶಿಲ್ಪಗಳು

*ಮಹಾದೇವಪ್ಪ ರಂಗಣ್ಣನವರ*
*ಸಹ ಪ್ರಾಧ್ಯಾಪಕರು ಇತಿಹಾಸವಿಭಾಗ*
*ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶಿರಸಿ*
*ಮೊ ನಂ 9901933180*

*ರಾಜಪ್ಪ ಎಂ ಎಚ್*
*ಸಹ ಪ್ರಾಧ್ಯಾಪಕರು ಇತಿಹಾಸವಿಭಾಗ*
*ಶ್ರೀಮತಿ ಇಂದಿರಾಗಾಂಧಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಕಾಲೇಜು*
*ಸಾಗರ*
*ಮೊ ನಂ 9845154010*

ಸೊರಬ ತಾಲ್ಲೂಕಿನ ದೇವಾಲಯಗಳಲ್ಲಿ ಕಂಡುಬರುವ ಶೈವ ಶಿಲ್ಪಗಳೆಂದರೆ ಶಿವ, ಗಣಪತಿ, ವೀರಭದ್ರ, ಭೈರವ, ಸೂರ್ಯ, ಚಂದ್ರ, ನಂದಿ, ಮುಂತಾದ ಶಿಲ್ಪಗಳನ್ನು ಉದಾಹರಿಸಬಹುದು. ಇವುಗಳಲ್ಲಿ ಪುರದ ಸಿದ್ಧೇಶ್ವರ ದೇವಾಲಯದ ಲಿಂಗು. ಬಂಕಸಾಣದ ಹೊಳೆಲಿಂಗಪ್ಪ ದೇವಾಲಯದ ಲಿಂಗು, ಉದ್ರಿಯ ಈಶ್ವರ ದೇವಾಲಯ, ಕೊಡಕಣಿಯ ಈಶ್ವರ ದೇವಾಲಯ, ಮಂಚಿಯ ಈಶ್ವರ ದೇವಾಲಯದ ಬೃಹತ್ ಲಿಂಗಗಳು, ಕುಪ್ಪಗಡ್ಡೆಯ ಈಶ್ವರ ದೇವಾಲಯ, ಹೊಳೆ ಜೋಳದ ಗುಡ್ಡೆ, ಬರಗಿ ಗ್ರಾಮದ ಲಿಂಗು, ಕೋಟಿಪುರ, (ಛಾ ಚಿ ಸಂ ೧೩) ಕುಪ್ಪಗಡ್ಡೆ, ತವನಂದಿ, ಹೀಗೆ ಮುಂತಾದ ಕಡೆಯಲ್ಲಿರುವ ಈಶ್ವರ ಅಥವಾ ಶಿವನನ್ನು ಲಿಂಗುರೂಪದಲ್ಲಿ ಪ್ರತಿಷ್ಟಾಪಿಸಿ ಆರಾಧಿಸುಲಾಗಿದೆ. ಈ ಎಲ್ಲ ಭಾಗಗಳಲ್ಲಿ ಪ್ರತಿಷ್ಠಾಪಿಸಿರುವ ಲಿಂಗಗಳು ಸುಮಾರು ಒಂದು ಅಡಿ ಎತ್ತರದಿಂದ ಐದು ಅಡಿಯಷ್ಟು ಎತ್ತರದ ಲಿಂಗುಗಳನ್ನು ಪ್ರತಿಷ್ಟಾಪಿಸಿಲಾಗಿದೆ.. ಇವುಗಳಲ್ಲಿ ಬಹಳ ಎತ್ತರ ಲಿಂಗು ಮಂಚಿ ಗ್ರಾಮದಲ್ಲಿ ಕಂಡುಬರುತ್ತದೆ. ಇದರ ಎತ್ತರ ಐದು ಅಡಿ, ಅಗಲ ಸುಮಾರು ಎರಡುವರೆ ಅಡಿ ಇರುವುದು. ಸೊರಬ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಶೈವ ದೇವಾಲಯಗಳೆ ಹೆಚ್ಚಾಗಿ ಇದ್ದು, ಇವುಗಳಲ್ಲಿ ಶಿವನ ರೂಪವಾದ ಲಿಂಗುಗಳ ರೂಪದಲ್ಲಿ ಆರಾಧಿಸುವುದು ಗಮನಾರ್ಹವಾಗಿದೆ.

**೧) ಶಿವಲಿಂಗ ಶಿಲ್ಪ.**

ಲಿಂಗವೆಂದರೆ ಪುರುಷ ಜನನೇದ್ರಿಯ, ಯೋನಿಯೆಂದರೆ ಸ್ತ್ರೀ ಜನನಾಂಗ, ಶಿವಲಿಂಗದಲ್ಲಿ ಎರಡೂ ಇರುವುದೆಂದರೆ ಸ್ತ್ರೀಪುರುಷರ ಸಂಯೋಗ, ಸಂಭೋಗ,[೫] ಶಿವಲಿಂಗದ ವಿಚಾರವಾಗಿ ಈ ತರಹದ ಚಿಂತನೆಗಳು ನೆಡೆದು ಬಂದಿರುವುದು ಕಂಡುಬರುತ್ತದೆ. ಶಿವನ ಹಿನ್ನಲೆಯಲ್ಲಿ ವೈದಿಕರು ರುದ್ರನನ್ನು ಕಾಣುವರು ಅದಕ್ಕಿಂತ ಮುಂಚೆ ಸೈಂದವರು ಪಶುರೂಪದಲ್ಲಿ ಕಾಣುವರು, ಮೆಹೆಂಜೋದಾರದಲ್ಲಿಯು ಸಹ ಶಿವನಿಗೆ ಪಶುಪತಿಯ

ಸ್ಥಾನ ಕೊಡಲಾಗಿದೆ. ಶಿವನಿಗೆ ಅನೇಕ ಹೆಸರುಗಳಿಂದ ಪ್ರಾಚೀನ ಕಾಲದಿಂದಲೂ ಕರೆದಿರುವರು. ಉದಾಹರಣೆಗೆ ರುದ್ರ, ಶರ್ವ, ಉಗ್ರ, ಆಶನಿ, ಭವ, ಪಶುಪತಿ, ಮಹಾದೇವ, ಈಶಾನ, ಎಂಬ ಹೆಸರುಗಳಿಂದ ಕರೆಯಲಾಗಿದೆ.[೬]

ಸೊರಬ ತಾಲ್ಲೂಕಿನ ಬಹುತೇಕ ಶಿವ ದೇವಾಲಯಗಳು ಕಾಲದ ದೃಷ್ಟಿಯಿಂದ ಪ್ರಾಚೀನ ಕಾಲದ ದೇವಾಲಯಗಳು ಮತ್ತು ಆಧುನಿಕ ಕಾಲದ ದೇವಾಲಯಗಳು ಲಭ್ಯವಾಗಿವೆ. ಪ್ರಾಚೀನ ಮತ್ತು ಮಧ್ಯಕಾಲೀನ ಕಾಲದ ಲಿಂಗಗಳನ್ನು ಗುರುತಿಸುವುದು ಕ್ಲಷ್ಟವಾದರೂ ಅ ಸುಂದರ ಅವರ ಮಾರ್ಗದರ್ಶನದಂತೆ ವಿಂಗಡಿಸುವುದು ಸುಲಭವಾಗಿದೆ. ಇವರ ಪ್ರಕಾರ ಬಾಣದಾಕಾರದ ಮಧ್ಯನಾಡಿ ಇರುವಂತಹವು ಪ್ರಾಚೀನವಾದವುಗಳು, ಬಾಣದಾಕಾರದ ನಾಡಿ ಇಲ್ಲದವುಗಳು ಆರ್ವಾಚೀನವಾದವುಗಳೆಂದು ಹೇಳಿದ್ದಾರೆ. ಹೀಗಾಗಿ ಇದು ಸುಲಭವಾಗಿದೆ. ಈ ತರಹದ ಶಿಲ್ಪಗಳು ಸೊರಬ ತಾಲ್ಲೂಕಿನ ಅನೇಕ ಪ್ರದೇಶಗಳಲ್ಲಿ ಗೋಚರಿಸುತ್ತವೆ. ಉದಾಹರಣೆಗೆ ಸೊರಬ ತಾಲ್ಲೂಕಿನ ಕೋಟಿಪುರದ ಕೈಠಬೈರವ ದೇವಾಲಯದ ಲಿಂಗು, ಕುಪ್ಪಗಡ್ಡೆಯ ರಾಮೇಶ್ವರ ದೇವಾಲಯದ ಲಿಂಗ. ಹೊಳೆ ಜೋಳದಗುಡ್ಡೆಯ ಈಶ್ವರ ದೇವಾಲಯದ ಲಿಂಗ, ಪುರದ ಸಿದ್ದೇಶ್ವರ ದೇವಾಲಯದ ಲಿಂಗ, ಅಂಡಿಗೆ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಲಿಂಗ, ಕುಪ್ಪೆಗ್ರಾಮದ ಹೊಂಡಕ್ಕೆ ಹೊಂದಿಕೊಂಡಂತೆ ಇರುವ ದೇವಾಲಯದಲ್ಲಿರುವ ಲಿಂಗ. ಹೆಚ್ಚೆ ಗ್ರಾಮದ ನೀಲಕಂಠೇಶ್ವರ ದೇವಾಲಯದ ಲಿಂಗ, ಈ ಎಲ್ಲ ಲಿಂಗಗಳು ಸುಮಾರು ೩ ಅಡಿ ಎತ್ತರದವುಗಳಾಗಿದ್ದು ಪ್ರತಿಯೊಂದು ಲಿಂಗವಿನ ಎದುರಿಗೆ ಅದೇ ಗಾತ್ರದ ನಂದಿಯನ್ನು ಪ್ರತಿಷ್ಠಾಪಿಸಿರುವುದು ಕಂಡುಬರುತ್ತದೆ. ಈ ಎಲ್ಲವನ್ನು ನೋಡಿದರೆ ಈ ತಾಲ್ಲೂಕಿನಲ್ಲಿ ಶೈವ ಧರ್ಮ ಪ್ರವರ್ದಮಾನದಲ್ಲಿತೆಂದು ತಿಳಿಯಬಹುದು. ಭಾರಂಗಿಯ ಕಲ್ಲೇಶ್ವರ ದೇವಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿರುವ ಮುಖಲಿಂಗ ಗಮನಾರ್ಹವಾಗಿದೆ. ಲಿಂಗದ ಪ್ರಜಾಭಾಗದಲ್ಲಿ ವದನವನ್ನು ಬಿಡಿಸಿದ್ದು ತ್ರಿನೇತ್ರಗಳೂ, ಮೂಗಿನ ಕೆಳಗೆ ಮೀಸೆಯೂ ಇದೆ, ಶಿವನ ಮುಖವನ್ನು ಮಾತ್ರ ಬಿಡಿಸಿರುವ ಈ ಮುಖಲಿಂಗ ವಿಶೇಷವಾಗಿದೆ[೭] ಶಿವಲಿಂಗು ಸೊರಬ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಕಾಣುವಂತಹದ್ದು. ಉದಾಹರಣೆಗೆ ತವನಂದಿ, ಉದ್ರಿ, ಕೋಟಿಪುರ, ಹುಣವಳ್ಳಿ, ಜೋಳದ ಗುಡ್ಡೆ, ದೂಗುರು, ಹಲಸಿನಕೊಪ್ಪ, ಕೋಳಿಸಾಲು, ಪುರ, ಉಳವಿ ಮಹಾಲಿಂಗೇಶ್ವರ, ಮಳಲಗದ್ದೆಯ ಈಶ್ವರ. ಸೊರಬ ತಾಲ್ಲೂಕಿನಲ್ಲಿ ಅತೀ ದೊಡ್ಡ ಗಾತ್ರದ ಲಿಂಗ ಕಂಡುಬರುವ ಸ್ಥಳವೆಂದರೆ ಮಂಚಿ ಗ್ರಾಮ. ಇಲ್ಲಿ ಸುಮಾರು ಐದು ಅಡಿ ಎತ್ತರದ ಲಿಂಗ ಕಂಡುಬರುತ್ತದೆ. ಹೀಗೆ ಅನೇಕ ಗ್ರಾಮಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುವ ಈಶ್ವರ ಲಿಂಗಗಳು ದೊರೆಯುತ್ತವೆ.

**೨) ವೀರಭದ್ರ.**

ಹಳೆ ಸೊರಬದ ಈಶ್ವರ ದೇವಾಲಯದ ಎದುರಿಗೆ ವೀರಭದ್ರನ ಮೂರ್ತಿ ಕಂಡು ಬರುತ್ತದೆ, ಸ್ಥಾನಿಕ ಭಂಗಿಯಲ್ಲಿರುವ ವೀರಭದ್ರನು ಚತುರ್ಭುಜದಾರಿಯಾಗಿದ್ದಾನೆ. ಕೈಯಲ್ಲಿ ಖಡ್ಗ, ಗುರಾಣಿ, ಬಿಲ್ಲು ಬಾಣಗಳನ್ನು

ಹಿಡಿದಿದ್ದಾನೆ. ತಲೆಯ ಮೇಲೆ ಕಮಲದಂತಹ ಕಿರೀಟ ಧರಿಸಿದ್ದಾನೆ. ಕೊರಳಲ್ಲಿ ವಿವಿಧ ಬಗೆಯ ಹಾರಗಳನ್ನು ಹಾಕಿಕೊಂಡಿದ್ದಾನೆ. ಮಣಿಸರ, ಹಾರ, ಕರಂಡ ಮುಕುಟ, ಕಂಠಿಹಾರ, ಜಪಮಾಲೆ, ವಸ್ತ್ರಾಭರಣಗಳು, ರುಂಡಮಾಲೆಗಳನ್ನು ಧರಿಸಿದ್ದಾನೆ. ಕೈಗಡಗ, ತೋಳ್ಬಂದಿಗಳನ್ನು ಧರಿಸಿದ್ದಾನೆ, ಬಿಳಗಿ ಗ್ರಾಮದಲ್ಲಿಯೂ ಕೂಡ ಇದೆ ಮಾದರಿಯ ಮೂರ್ತಿ ಕಂಡುಬರುತ್ತದೆ. ನೇರಲಗಿ ಗ್ರಾಮದ ವೀರಭದ್ರೇಶ್ವರ ಮೂರ್ತಿ ಕೂಡ ಇದೆ ಮಾದರಿಯಲ್ಲಿದೆ. ಸುಮಾರು ಐದು ಅಡಿ ಎತ್ತರದ ವೀರಭದ್ರ ಮೂರ್ತಿ ಕಂಡುಬರುತ್ತದೆ. ಹುಣವಳ್ಳಿಯ ವೀರಭದ್ರನ ಮೂರ್ತಿಯನ್ನು ಹಳೆ ದೇವಾಲಯದಲ್ಲಿ ಇಟ್ಟಿರುವುದು ಕಂಡುಬರುತ್ತದೆ. ಕಾನಹಳ್ಳಿಯ ವೀರಭದ್ರೇಶ್ವರ ದೇವಾಲಯ ಇದು ಕಾನಹಳ್ಳಿಯಿಂದ ಸುಮಾರು ಒಂದುವರೆ ಕಿ,ಮೀ. ದೂರದಲ್ಲಿರುವುದು. ಇದು ಕೂಡ ಅದೇ ಮಾದರಿಯಲ್ಲಿದೆ. ಉಳವಿ ಹೋಬಳಿಯಲ್ಲಿ ಕಂಡುಬರುವ ದೂಗುರು ಗ್ರಾಮದಲ್ಲಿಯೂ ಸಹ ನಿಂತಿರುವ ವೀರಭದ್ರ ದೇವರ ಮೂರ್ತಿ ಕಂಡುಬರುತ್ತದೆ. ಹೀಗೆ ಅನೇಕ ಕಡೆಗಳಲ್ಲಿ ಈ ತರಹದ ವೀರಭದ್ರನ ಶಿಲ್ಪಗಳು ಕಂಡುಬರುತ್ತವೆ.

**೩) ಭೈರವ ಶಿಲ್ಪ.**

ಹಳೆ ಸೊರಬ ಗ್ರಾಮದ ಈಶ್ವರ ದೇವಾಲಯದ ಮುಂಭಾಗದಲ್ಲಿ ದ್ವಿಭಂಗಿಯಲ್ಲಿ ನಿಂತಿರುವುದು ಕಾಣುತ್ತದೆ. ಈ ಭೈರವ ಚತುರ್ಭುಜದಾರಿಯಾಗಿದ್ದು ಕೈಗಳಲ್ಲಿ ಮುಕುಟ ರುಂಡಮಾಲೆ, ಕೈಗಳಲ್ಲಿ ಕೈಗಡಗ, ಕಾಲುಗಳಲ್ಲಿ ಕಾಲಗಡಗ, ಕೊರಳಹಾರಗಳನ್ನು ಧರಿಸಿದ್ದಾನೆ. ಒಂದು ಕೈಯಲ್ಲಿ ಕಡಿದ ರುಂಡ, ರುಂಡದ ಕೆಳಗೆ ನಾಯಿ ಒಂದರ ಚಿತ್ರಣ ಕಂಡುಬರುತ್ತದೆ. ಶಿಲ್ಪದ ಬಲಭಾಗದಲ್ಲಿ ಅಸ್ಥಿಪಂಜರದ ರೀತಿಯಲ್ಲಿರುವ ಮನುಷ್ಯನಾಕಾರದ ಚಿತ್ರಣ ಇರುವುದು ವಿಶೇಷ.

ಶಿವಪುರಾಣದ ಪ್ರಕಾರ ಭೈರವ ಸಂಹಾರ ಲೀಲಾಮೂರ್ತಿಗಳಲ್ಲಿ ಒಬ್ಬನು. ಭೈರವನನ್ನು ಕ್ಷೇತ್ರಪಾಲಕನೆಂದು ಪೂಜಿಸುವರು. ಭೈರವನೆಂದರೆ ಭೂತ ಪ್ರೇತಗಳ ಪಿಶಾಚಿಗಳ ಒಡಿಸಲಿಕ್ಕಾಗಿ ಪೂಜಿಸುವರು. ಶಿವ ಪಾರ್ವತಿಯರ ಉಗ್ರಸ್ವರೂಪ ಒಂದು ಪ್ರತಿಮಾಲಕ್ಷಣವೇ ಭೈರವ ಅಥವಾ ಭೈರವಿ ಇವೆರಡೂ ಸ್ವಲ್ಪ ಸಮಭಂಗಿಯಲ್ಲಿರುತ್ತವೆ.

**೪) ಭೈರವ ಪಾದ.**

ಕೊಡಕಿಣಿ ಗ್ರಾಮದ ಸಿದ್ಧರಾಮೇಶ್ವರ ದೇವಾಲಯದ ಮುಂಭಾಗದಲ್ಲಿ ಈ ಶಿಲ್ಪವಿದೆ. ಇದು ಸುಮಾರು ಒಂದು ಅಡಿ ಉದ್ದ ಮತ್ತು ಒಂದು ಅಡಿ ಅಗಲದ ಪಟ್ಟಿಕೆಯ ಮೇಲೆ ಈ ಶಿಲ್ಪವನ್ನು ಕೆತ್ತಲಾಗಿದೆ. ಈ ಶಿಲಾಫಲಕದ ಪಾದಗಳ ಸುತ್ತ ನಾಗಸರ್ಪವನ್ನು ಸುತ್ತಿದ್ದು ಮಧ್ಯಭಾಗದಲ್ಲಿ ಎರಡು ಪಾದುಕೆಗಳನ್ನು ತೋರಿಸಲಾಗಿದೆ. ಪಾದುಕೆಯ ಮಧ್ಯಭಾಗದಲ್ಲಿ ತಲೆ ಆಕಾರದಲ್ಲಿ ಕೆತ್ತನೆ ಮಾಡಲಾಗಿದೆ. ಶೈವ ಧರ್ಮದ ಶಿವನ ಅವತಾರದಲ್ಲಿ ಭೈರವನ ಅವತಾರವೂ ಒಂದು. ಭೈರವನ ವಾಹನವಾದ ನಾಗಶಿಲ್ಪವನ್ನು ಅವನ ಕಾಲಿನ ಬಳಿ

ಕೆತ್ತಿರುವುದು ಕಂಡುಬರುತ್ತದೆ. ಈ ನಾಗ ಶಿಲ್ಪವು ಭೈರವನ ಕಾಲುಗಳನ್ನು ಬಂಧಿಸಿರುವಂತಿದೆ. ಹೀಗಾಗಿ ಇದನ್ನು ಭೈರವನ ಪಾದವೆಂದು ನಾವು ತಿಳಿಯಬಹುದು.

**೫) ನಂದಿ ಸ್ತಂಬ.**

ಇದೊಂದು ಸೊರಬ ತಾಲ್ಲೂಕಿನಲ್ಲಿ ಕಂಡುಬರುವ ವಿಶಿಷ್ಟ ಶಿಲ್ಪವೆಂದು ಹೇಳಬಹುದು. ಸುಮಾರು ಐದು ಅಡಿ ಎತ್ತರ ಮತ್ತು ಒಂದು ಅಡಿ ದಪ್ಪನೆಯ ಕಲ್ಲು ಕಂಬದ ಮೇಲೆ ಸುಮಾರು ಒಂದು ಒಂದುವರೆ ಅಡಿ ಎತ್ತರದ ನಂದಿಯನ್ನು ಏಕ ಶಿಲೆಯಲ್ಲಿ ಕೆತ್ತಿರುವುದು ಕಂಡುಬರುತ್ತದೆ. ಇದು ಏಕ ಶಿಲೆಯಲ್ಲಿರುವಂತಹ ಶಿಲ್ಪವಾಗಿದ್ದು, ಬಹುತೇಕ ಶೈವ ಧರ್ಮದ ಶಿವ ದೇವಾಲಯದ ಮುಂಭಾಗದಲ್ಲಿರುತ್ತದೆ. ಉದಾಹರಣೆಗೆ ಸೊರಬ ತಾಲ್ಲೂಕಿನ ಕೋಳಿಸಾಲು ಗ್ರಾಮದ ಈಶ್ವರ ದೇವಾಲಯ, ಕುಬಟೂರಿನ ರಾಮೇಶ್ವರ ದೇವಾಲಯ, ದೂಗುರಿನ ರಾಮೇಶ್ವರ ದೇವಾಲಯದ ಮುಂಭಾಗದಲ್ಲಿ ಈ ತರಹದ ಶಿಲ್ಪವಿರುವುದು ಕಂಡುಬರುತ್ತದೆ.

**೬) ಗಣಪತಿ.**

ನಿತ್ಯ ವ್ಯವಹಾರದಲ್ಲಿ ಪ್ರತಿಯೊಂದು ಕಾರ್ಯದಲ್ಲೂ ನೆನೆಯುವ ದೇವನೆ ಈ ಗಣಪತಿ. ಇವನ ಕೀರ್ತಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ ವೇದ ಕಾಲದಲ್ಲಿ ಗಣಪತಿ ಉಲ್ಲೇಖ ಕಾಣುತ್ತೇವೆ. ಅದರೆ ಇಲ್ಲಿನ ಗಣಪತಿ ದೇವ ಅಥವಾ ದೇವತೆಯಲ್ಲಾ, ಇಲ್ಲಿ ಗಣ ಎಂದರೆ ಜನರ ಗುಂಪು, ಮನುಷ್ಯರ ಗಣ, ಶ್ರೋತೃಗಳ ಗಣ, ಅಂದರೆ ಗುಂಪಿಗೆ ಒಡೆಯ ಎಂದಷ್ಟೇ ಅರ್ಥ.[೮] ಆನಂತರದ ಕಾಲಮಾನಗಳಲ್ಲಿ ಗಣಪತಿಯೆಂದರೆ ವಿಘ್ನ ಎಂತಲೂ ಕೆಲ ಕಾಲದ ನಂತರ ಅದು ವಿನಾಯಕ ಎಂತಲೂ. ಹೀಗೆ ಕಾಲಗಳ ನಂತರ ಗಜಮುಖನಾದಂತೆ ಪ್ರಾರಂಭದ ಕಾಲದಲ್ಲಿ ಗಣಪತಿಯನ್ನು ದೇವಾಲಯಗಳ ಹೊರಗೆ ದ್ವಾರಪಾಲಕರ ಸ್ಥಾನದಲ್ಲಿ ಕುಳ್ಳಿಸಿರುವ ಸಂದರ್ಭ ಕೂಡ ಇತ್ತು. ಸಪ್ತಮಾತೃಕೆಯರ ಜೊತೆ ಇದ್ದಾಗಲೂ ಅವನಿಗೆ ರಕ್ಷಣೆಗಾಗಿ ಕುಳ್ಳಿಸಿರುವುದುಂಟು. ಆನಂತರದ ಕಾಲಘಟ್ಟದಲ್ಲಿ ಅವನು ದೇವನಾಗಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿದವನಾಗಿರುವಂತೆ ತೋರುತ್ತದೆ. ಈ ಎಲ್ಲ ಹಿನ್ನಲೆ ಹೊಂದಿರುವ ಗಣಪತಿ ಉಗಮಕ್ಕೆ ಈ ರೀತಿಯ ಒಂದು ಕಥೆ ಕೂಡ ಇದೆ. ಸೇವಕ ವರ್ಗಕ್ಕೆ ಕೊರತೆ ಇಲ್ಲದ ಲೊಕಮಾತೆ ಪಾರ್ವತಿ ದೇವಿ, ತನ್ನ ಸ್ನಾನ ಗೃಹದ ಕಾವಲು ಕಾಯಲು ತನ್ನ ಮೈ ಬೆವರಿನ ಕಲ್ಮಶದಿಂದ ಈ ಮಗುವನ್ನು ಸೃಷ್ಟಿ ಮಾಡಿದಳು, ಶಿವನನ್ನು ತಡೆದು ಶಿವನ ಕೋಪದಿಂದ ಆಯುಧಕ್ಕೆ ಗುರಿಯಾಗಿ ಕೊನೆಗೆ ಮಗನೆಂದು ತಿಳಿದು ಜಗವೆಲ್ಲ ಶೋಧಿಸಿ ಆನೆಯ ತಲೆ ತಂದು ಜೋಡಿಸಿದನೆಂದು ಹೇಳುವ ಕಥೆ ಜನಮಾನಸದಲ್ಲಿ ಇಂದಿಗೂ ಅಚ್ಚಾಗಿದೆ. ಈ ಶಿಲ್ಪಗಳು ತಾಲ್ಲೂಕಿನ ಅನೇಕ ಕಡೆಗಳಲ್ಲಿ ಕಂಡುಬರುತ್ತವೆ ಅವುಗಳ ಅಳತೆ. ಎತ್ತರ, ಗಾತ್ರಗಳಲ್ಲಿ ವ್ಯತ್ಯಾಸವಿರುವುದು. ಉದಾಹರಣೆಗೆ ಕುಬಟೂರಿನ ಈಶ್ವರ ದೇವಾಲಯದಲ್ಲಿ, ಕೋಟಿಪುರದ ಕೈಠಭೈರವದೇವಾಲಯದ ಗಣಪತಿ, (ಛಾ ಚಿ ಸಂ ೨೧) ಬಹುತೇಕ ಈ ಎಲ್ಲ ಮೂರ್ತಿಗಳು

ಒಂದೆ ಮಾದರಿಯಲ್ಲಿರುವುದು ಕಂಡುಬರುತ್ತದೆ. ಆದರೆ ಹಲಸಿನಕೊಪ್ಪದ ಈಶ್ವರ ದೇವಾಲಯದ ಮುಂದೆ ಇರುವ ಮೂರ್ತಿಯು ಬಹಳ ಚಿಕ್ಕದಾಗಿದ್ದು ಸುಮಾರು ಅರ್ದ ಅಡಿಗಳಷ್ಟು ಇರುವುದು ತಿಳಿದುಬರುತ್ತದೆ.

ಗಣಪತಿ ಆನೆಯ ಮುಖದವನು ಹೀಗಾಗಿ ಅವನಿಗೆ ಗಜಮುಖ ಎಂದು ಕರೆಯುವರು. ಇವನ ಸೊಂಡಿಲು ಎಡ ಅಥವಾ ಬಲಕ್ಕೆ ಇರುತ್ತದೆ. ಇವನ ಕಿವಿಗಳು ಅಗಲವಾಗಿದ್ದು ಇತನಿಗೆ ಎರಡು, ನಾಲ್ಕು, ಆರು, ಎಂಟು. ಕೆಲವೊಮ್ಮೆ ಹದಿನಾರು ಕೈಗಳಿರುತ್ತವೆ. ಪ್ರಾಚೀನ ಗಣಪತಿ ನಿರಾಭರಣನಾಗಿರುತ್ತಾನೆ. ಆದರೆ ಆಧುನಿಕಗಣಪತಿ ಅನೇಕ ಆಭರಣಗಳಿಂದ ಅಲಂಕೃತನಾರುತ್ತಾನೆ.

ಸೊರಬ ತಾಲ್ಲೂಕಿನ ಅನೇಕ ಭಾಗಗಳಲ್ಲಿ ಈ ತರಹದ ಗಣಪತಿ ಮೂರ್ತಿಗಳಿವೆ. ಕುಬಟೂರಿನ ಗಣಪತಿ ವಿಗ್ರಹ ಎರಡು ಅಡಿ ಎತ್ತರವಾಗಿದ್ದು, ಗ್ರಾನೈಟ್ ಶಿಲೆಯಿಂದ ನಿರ್ಮಾಣ ಮಾಡಲಾಗಿದೆ. ಚರ್ತುಭುಜದಾರಿಯಾಗಿದ್ದು ಕಿರಿಟದಾರಣೆ ಮಾಡಿ ಸುಖಾಸಿನನಾಗಿ ಮೇಲಿನ ಕೈಗಳಲ್ಲಿ ಪಾಶಾಂಕುಶವಿದ್ದು ಕೆಳಗಿನ ಬಲಕೈ ತೃಟಿತಗೊಂಡಿದೆ, ಎಡಕೈಯಲ್ಲಿ ಮೋದಕ ಉದರವನ್ನು ಸುತ್ತಿರುವ ಸರ್ಪ, ಕೊರಳಹಾರ, ಮಣಿಸರ, ಕಾಲ್ಕಡಗ, ಕೈಕಡಗ, ಪಾಣಿಪೀಠದಲ್ಲಿ ಮೂಷಿಕವಿದೆ. ಮತ್ತೊಂದು ವಿಗ್ರಹವೂ ಉದ್ರಿ ಗ್ರಾಮದ ಈಶ್ವರ ಮತ್ತು ವೀರಭದ್ರ ದೇವಾಲಯದ ಎದುರಿಗೆ ಇದ್ದು. ಇದು ವರದ ಹಸ್ತ ನೀಡುತ್ತಿದೆ, ಕೋಟಿಪುರದ ಕೈಠಬೈರವ ದೇವಾಲಯದಲ್ಲಿ ಮತ್ತು ಬೀಳಗಿ ಗ್ರಾಮದಲ್ಲಿ ಒಂದು ಮೂರ್ತಿ ಕಂಡುಬಂದಿದ್ದು ಇದು ಕೂಡ ತೃಟಿತಗೊಂಡಿದೆ. ಕೋಡನಕಟ್ಟೆಯ ಮಹಾಗಣಪತಿ ಇದು ಆಧುನಿಕ ಶೈಲಿಯಲ್ಲಿರುವುದು. ಮಾಗಡಿ ಗ್ರಾಮದ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಲ್ಲಿ ಸುಮಾರು ಮೂರು ಅಡಿ ಎತ್ತರದ ಮೂರ್ತಿ ಕಂಡುಬರುತ್ತದೆ. ಕೊಂಡಗಳಲೇ ಗ್ರಾಮದ ಈಶ್ವರ ದೇವಾಲಯದ ಗರ್ಭಗುಡಿಯ ಬಲಬದಿಗೆ ಒಂದು ಗಣಪತಿ ಮೂರ್ತಿ ಇರುವುದು. ಕೆಲವು ದೇವಸ್ಥಾನದ ಬಾಗಿಲ ಮೇಲೆ ಕೂಡ ಗಣಪತಿ ವಿಗ್ರಹ ಕಂಡುಬರುತ್ತದೆ ಉದಾಹರಣೆಗೆ ವೀರಗಾಣಾಪುರದ ವೀರಭದ್ರೇಶ್ವರ ದೇವಾಲಯದ ಬಾಗಿಲ ಮೇಲೆ ಸುಮಾರು ಒಂದು ಅಡಿ ಎತ್ತರದ ಮೂರ್ತಿಯಿದೆ. ಉದ್ರಿ ದೇವಾಲಯ, ಕೋಟಿಪುರದ ದೇವಾಲಯ ಹೀಗೆ ಮುಂತಾದ ಕಡೆಗಳಲ್ಲಿ ಗಣಪತಿಯನ್ನು ಪ್ರತಿಷ್ಠಾಪಿಸಿರುವುದು ಈತನ ಆರಾಧನೆಗಳನ್ನು ದೃಡೀಕರಿಸುತ್ತದೆ.

**೭) ಚತುರ್ಮುಖ ಬ್ರಹ್ಮನ.**

ಸೊರಬ ತಾಲ್ಲೂಕಿನ ಕೊಡಕಣಿ ಗ್ರಾಮದ ಹನುಮಂತ ದೇವಾಲಯದ ಮುಂಭಾಗದಲ್ಲಿ ಮತ್ತು ಹಳೆಸೊರಬ ಹನುಮಂತ ದೇವಾಲಯಗಳ ಎದುರಿಗೆ, ಬನಶಂಕರಿ ದೇವಾಲಯದ ದೀಪಸ್ತಂಭದ ಕೆಳಗೆ ಈ ತರಹದ ಒಂದು ಶಿಲ್ಪ ಕಂಡುಬಂದಿದೆ. ಇದು ನಾಲ್ಕು ಮುಖಗಳನ್ನು ಹೊಂದಿರುವ ಬ್ರಹ್ಮ ಶಿಲ್ಪವಾಗಿದ್ದು ಸುಂದರ ಮುಖ, ಎಲ್ಲ ಮುಖಗಳು ಒಂದೇ ತೆರನಾಗಿದ್ದು. ನೀಳವಾದ ಮೂಗು, ತೆರದ ಕಣ್ಣುಗಳು, ಕಿವಿಯಲ್ಲಿ ಕಿವಿಯೋಲೆ, ಹಣೆಯ ಮೇಲೆ ಕೆತ್ತನೆಗಳು, ಕೊರಳಲ್ಲಿ ಹಾರಗಳಿವೆ.

**೮) ಹನುಮಂತ ಶಿಲ್ಪ.**

ಗ್ರಾಮೀಣ ಜನಮಾನಸದಲ್ಲಿ ಒಂದಾಗಿರುವ ಈ ಹನುಮಂತ ದೇವರು ಬಹುತೇಕ ಗ್ರಾಮಗಳಲ್ಲಿ ಕಂಡುಬರುತ್ತದೆ. ರಾಮಾಯಣದ ಕಿಷ್ಕಿಂದೆ ಪರ್ವದಲ್ಲಿ ಹನುಮಂತನ ಜನನವಾಯಿತೆಂದು ತಿಳಿಯುತ್ತದೆ. ಈ ಹನುಮಂತ ಅಥವಾ ಹನುಮ, ವಾಯುಪುತ್ರ. ರಾಮನಭಂಟ. ಕಪಿ, ಮುಂತಾದ ಹೆಸರುಗಳಿಂದ ಕರೆಯುವ ಇವನು ಯಾವ ಧರ್ಮ ಅಥವಾ ಪಂಥಕ್ಕೂ ಸೇರದ ಐಕ್ಯತೆಯ ಸಂಕೇತವಾಗಿದ್ದಾನೆ. ಇದರಿಂದಲೇ ದಕ್ಷಿಣ ಭಾರತದಲ್ಲಿ ಆಳ್ವಿಕೆ ಮಾಡಿದ ಅನೇಕ ರಾಜಮನೆತನಗಳು ಹನುಮನ ಚಿತ್ರವನ್ನು ಅವರ ನಾಣ್ಯಗಳ ಮೇಲೆ ಇಲ್ಲವೇ ಧ್ವಜಸ್ತಂಭದಲ್ಲಿ, ಲಾಂಛನದಲ್ಲಿ ಬಳಸಿಕೊಂಡಿದ್ದಾರೆ. ಹೊಯ್ಸಳ ಕಾಲದ ಉತ್ತರಾರ್ಧಭಾಗದಿಂದ ಶ್ರೀರಾಮ ಮತ್ತು ಹನುಮಂತನ ದೇವಾಲಯಗಳು ಮತ್ತು ರಾಮದೇವರ ಮುಂದೆ ಹನುಮನ ಮೂರ್ತಿಶಿಲ್ಪ ಪ್ರತಿಷ್ಠಾಪಿಸುವ ಪರಂಪರೆ ಬೆಳೆದು ಬಂದಿದೆ. ಕರ್ನಾಟಕದಲ್ಲಿ ವಿಜಯನಗರದ ಅರಸರ ಕಾಲನಂತರದಲ್ಲಿ ಈ ದೇವರ ಮೂರ್ತಿ ಮತ್ತು ದೇವಾಲಯಗಳು ಹೆಚ್ಚು ಪ್ರಚಲಿತವಾಯಿತೆಂದು ತಿಳಿಯುತ್ತದೆ. ಈ ತರಹದ ಶಿಲ್ಪಗಳು ಸೊರಬ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿರುವುದು ಕಂಡುಬಂದಿದೆ. ಉದಾಹರಣೆಗೆ ಸೊರಬ ತಾಲ್ಲೂಕಿನ ಬಹಳ ಪ್ರಸಿದ್ದ ಹನುಮನ ಶಿಲ್ಪಗಳೆಂದರೆ ಮಂಚಿ ಗ್ರಾಮದ ಶಿಲ್ಪ, ಕೊಡಕಣಿ ಗ್ರಾಮದ ಶಿಲ್ಪ, ಉದ್ರಿ, ಚಂದ್ರಗುತ್ತಿ, ಕುಬಟೂರು, ಆನವಟ್ಟಿ, ಕುಪ್ಪಗಡ್ಡೆ, ಮುಂತಾದ ಗ್ರಾಮಗಳಲ್ಲಿ ಈ ಶಿಲ್ಪಗಳು ಸಾಮಾನ್ಯವಾಗಿವೆ. ಆದರೆ ಕುಪ್ಪೆ ಗ್ರಾಮದ ಶಿಲ್ಪವೂ ಬಹಳ ವಿಶೇಷವಾಗಿದೆ. ಈ ಗ್ರಾಮದಲ್ಲಿರುವ ರಾಮ, ಸೀತಾ, ಮತ್ತು ಹನುಮನ ದೇವಾಲಯವೊಂದಿದೆ ಇದರಲ್ಲಿ ಒಂದು ಕಲ್ಲಿನ ಮೂರ್ತಿಯಾದರೆ ಮತ್ತೊಂದು ಕಂಚಿನ ಪ್ರತಿಮೆ. ಬಹಳ ಚಿಕ್ಕಗಾತ್ರದ ಮೂರ್ತಿಗಳಾಗಿದ್ದು ಸೀತೆ ದೇವಾಲಯದಲ್ಲಿರುವ ಶಿಲ್ಪವೂ ಸೀತೆಯ ಎದುರು ಭಾಗದಲ್ಲಿ ಕುಳಿತು ಸೀತೆಗೆ ತಾನು ತಂದಿರುವ ಮುದ್ರೆ ಉಂಗುರವನ್ನು ತೋರಿಸುವಂತೆ ಕೆತ್ತಲಾಗಿದೆ. ಈ ಎಲ್ಲ ಮೂರ್ತಿಗಳಲ್ಲಿ ಎರಡು ಕೈಗಳು, ಕೀರಿಟ, ಕಂಠಿಹಾರ, ಮುಕುಟ, ತೋಳಬಂದಿ, ಕಟಿವಸ್ತ್ರ, ಕೈಗಡ, ಕಾಲ್ಗಡಗ ಮೊದಲಾದ ಆಭರಣ ಮತ್ತು ವಸ್ತ್ರಗಳನ್ನು ಕೆತ್ತಿರುವುದು ಗೋಚರಿಸುತ್ತದೆ.

## ಅಡಿಟಿಪ್ಪಣಿಗಳು


1. ಜ್ಞಾನಾನಂದ ಜಿ, ೨೦೦೨, ಶಿಲ್ಪಾದರ್ಶ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
2. ಶ್ರೀಕಂಠಶಾಸ್ತ್ರೀ ಎಸ್ ೨೦೧೪, ಹೊಯ್ಸಳ ವಾಸ್ತುಶಿಲ್ಪ, ಪರಿಶ್ರೀ ಪ್ರಿಟರ್ಸ್, ಬೆಂಗಳೂರು, ,
3. ಪ್ರಭಾಕರ ಎಂ ಎನ್, ೨೦೧೧, ದೇವಾಲಯ ವಾಸ್ತು, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

4. ಬಡಿಗೇರ ವಾಸುದೇವ (ಸಂ) ೨೦೦೮, ಪಾಡಿಗಾರ ವಿ ಶ್ರೀನಿವಾಸ, ದೇವಾಲಯ ವಾಸ್ತುಶಿಲ್ಪ( ಲೇ) ಹಾನಗಲ್ಲು, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ,

5. ಎ ಕ VIII ಬಿ ಎಲ್ ರೈಸ್ ೧೯೦೪ ಸೊರಬ.

6. ಹೆಗಡೆ ರಾಜಾರಾಮ ಮತ್ತು ಅಶೋಕ ಶೆಟ್ಟರ್ (ಸಂ)ಮಲೆಕರ್ನಾಟಕದ ಅರಸುಮನೆತಗಳು, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ,

7. ಗೋಪಾಲ ಆರ್, (ಸಂ) ೨೦೦೮ ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಶಿವಮೊಗ್ಗ ಜಿಲ್ಲೆಯ ದೇವಾಲಯಗಳ ವಾಸ್ತುಶಿಲ್ಪ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಳ ನಿರ್ದೇಶನಾಲಯ, ಮೈಸೂರು,

8. ಪಟೇಲ ಅನುರಾಧ, ೨೦೦೭, ಬಿಚ್ಚುಗತ್ತಿ ಶ್ರೀಪಾದರ ಸಂಶೋಧನೆಗಳು. ಮಲ್ನಾಡ್ ರಿಸರ್ಚ್ ಅಕಾಡೆಮಿ, ಶಿವಮೊಗ್ಗ.

9. ಅಂಬಳಿಕೆ ಹಿರಿಯಣ್ಣ (ಸಂ) ೨೦೦೯, ಕನ್ನಡ ವಿಷಯ ವಿಶ್ವ ಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

10. ಕೊಟ್ರೇಶ ಎಂ, ೨೦೧೧,ಬಳ್ಳಾರಿ ಜಿಲ್ಲೆಯ ಕೋಟೆಗಳು, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

11. ಅನುರಾಧ ಪಟೇಲ್ ಆರ್, ೨೦೦೭, ಬಿಚ್ಚುಗತ್ತಿ ಶ್ರೀಪಾದರ ಸಂಶೋಧನೆಗಳು, ಮಲ್ನಾಡ್ ರಿಸರ್ಚ್ ಅಕಾಡೆಮಿ, ಶಿವಮೊಗ್ಗ.